



ಬಿಸಿಲು, ಮಳೆ, ಗಾಳಿಗೆ ಸ್ವಚ್ಛಂದವಾಗಿ ಮೈಯೊಡ್ಡಿ ಅವುಗಳ ಸತ್ವ ಹೀರಿಕೊಂಡು ಘಮಘಮಿಸುತ್ತದೆ ಕಾಡು ಕುಸುಮ. ಬಿಸಿಲಿಗೆ ಮೈ ತಾಕಿಸಿಕೊಳ್ಳದೆ, ಸತ್ವ ಕಳೆದುಕೊಂಡ ಮಣ್ಣಿನಲ್ಲಿಯೇ ಗೊಬ್ಬರದ ನೆರವಿನಿಂದ ಅರಳುತ್ತದೆ ಕುಂಡದ ಹೂವು. ಈ ಹೂವು ನೋಡಲು ಚೆಂದವಾದರೂ ಕಾಡು ಕುಸುಮದ ಸೊಬಗು ಅದಕ್ಕಿಲ್ಲ. ಹೌದು, ಇಂದಿನ ಪೀಳಿಗೆಯ ಬಾಲ್ಯಕ್ಕೂ, ಹಿಂದಿನ ಪೀಳಿಗೆಯ ಬಾಲ್ಯಕ್ಕೂ ಈ ಹೂವುಗಳಿಗೆ ಇರುವಷ್ಟೇ ವ್ಯತ್ಯಾಸ.

'ಏನು ಈ ರೂಪಕದ ಅರ್ಥ' ಎನ್ನುವ ಪ್ರಶ್ನೆಯೇ? ಸೂರ್ಯನ ಬೆಳಕಿಗೆ ಸರಿಯಾಗಿ ಒಡ್ಡಿಕೊಳ್ಳದಿರುವ ದೃಷ್ಟಿಯಲ್ಲಿ ದೋಷಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ ಎನ್ನುತ್ತದೆ ಇತ್ತೀಚಿನ ಒಂದು ವೈದ್ಯಕೀಯ ಸಂಶೋಧನಾ ವರದಿ. ನಾವೀಗ ಮಕ್ಕಳಿಗೆ ಬಿಸಿಲೇ ಸೋಕದಂತೆ ಕುಂಡದ ಹೂವಿನ ಹಾಗೆ ಬೆಳೆಸುತ್ತಿದ್ದೇವೆ ತಾನೆ? 'ಇಲ್ಲ' ಎನ್ನಲೇಬೇಡಿ. ಎಳೆಯ ಕಣ್ಣುಗಳ ಮೇಲಿನ ಸೋಡಾ ಗ್ಲಾಸಿನಂತಹ ಕನ್ನಡಕಗಳೇ ಎಲ್ಲಾ ಕಥೆಯನ್ನು ಹೇಳುತ್ತಿವೆ. ಒಂದು ಮಗುವಾದರೂ ಮಗು ಕನ್ನಡಕ ಹಾಕದೆ ಕುಳಿತಿರುವಂತಹ ಒಂದಾದರೂ ಕ್ಲಾಸ್‌ರೂಮ್ ಈಗಿನ ದಿನಗಳಲ್ಲಿ ಕಾಣಸಿಗುತ್ತಿದೆಯೆ? ಖಂಡಿತಾ ಅಲ್ಲ.

ಏಕೆ ಹೀಗೆ? ಪ್ರತಿ ಊರಿನ ಓಣಿ–ಓಣಿಯಲ್ಲಿ ಕಾಣಸಿಗುತ್ತಿದ್ದ ಚಿನ್ನಿದಾಂಡು, ಕುಂಟಾಬಿಲ್ಲೆ, ಲಗೋರಿ, ಡುಬ್ಬಚೆಂಡು, ಕಣ್ಣಾಮುಚ್ಚಾಲೆಯಂತಹ ಆಟಗಳ ಸೊಬಗು ಈಗಿಲ್ಲ. ಸ್ಮಾರ್ಟ್ ಫೋನ್‌ನಲ್ಲೇ ಆಟದ ಮೈದಾನ ತೆರೆದುಕೊಂಡ ಮೇಲೆ ಮಕ್ಕಳು ಆಟವಾಡಲು ಮನೆಯಿಂದ ಹೊರ ಬರುವುದನ್ನೇ ಮರೆತಿದ್ದಾರೆ. ಬೆಳೆದ ಮಕ್ಕಳ ಮಾತು ಹಾಗಿರಲಿ, ಹಾಸಿಗೆಯಲ್ಲಿ ಹೊರಳಾಡುವ ಕಂದಮ್ಮಗಳ ಕೈಗೂ ಫೋನ್ ಕೊಟ್ಟು, 'ನೋಡ್ರಿ, ಬಿಟ್ಟ ಕಣ್ಣುಗಳನ್ನು ಹಾಗೇ ಬಿಟ್ಟುಕೊಂಡು ಹೇಗೆ ನೋಡ್ತಾ ಇದಾನೆ. ಏನೋ ಪುಟ್ಟ, ಅದಾಗಲೇ ವಾಟ್ಸ್ ಆ್ಯಪ್, ಫೇಸ್‌ಬುಕ್ ಶುರು ಮಾಡ್ಕಂಡೇನೋ' ಎಂದು ನಾವೇ ಸಂಭ್ರಮಿಸುತ್ತೀವಲ್ಲ!

ಒಂದೆಡೆ ಮಕ್ಕಳ ದೃಷ್ಟಿ ಸೂರ್ಯನ ಬೆಳಕಿಗೆ ಹೆಚ್ಚಾಗಿ ತೆರೆದುಕೊಳ್ಳುವುದಿಲ್ಲ. ಇನ್ನೊಂದೆಡೆ ಎವೆಯಿಕ್ಕದೆ